ಕ್ರಮಾಂಕ: ಭೂಸುಧಾ. 373:82-83

ವಿಶೇಷ ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ: 21-11-83.

## ಸುತ್ತೋಲೆ

ವಿಷಯ: ಕರ್ನಾಟಕ (ಮತೀಯ ಮತ್ತು ಧರ್ಮದಾಯ) ಇನಾಂ ರದ್ದಿಯಾತಿ ಕಾಯಿದೆ 1955, ಕರ್ನಾಟಕ (ಸುಂಡೂರು ಪ್ರದೇಶ) ಇನಾಂ ರದ್ದಿಯಾತಿ ಕಾಯಿದೆ 1976 ಮತ್ತು ಕರ್ನಾಟಕದ ಕೆಲವು ಇನಾಂ ರದ್ದಿಯಾತಿ ಕಾಯಿದೆ 1977 ರನ್ವಯ ಕೆಲವೊಂದು ಇನಾಂ ಜಮೀನುಗಳ ಅಧಿಭೋಗದಾರಿಕೆಯ ಹಕ್ಕನ್ನು ಕೋರಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು 31-12-83ರವರೆಗೆ ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಕ್ರಮಾಂಕ: ಆರ್‌ಡಿ.33.ಐಎನ್‌ಎಂ.83 (ಭಾಗ) ದಿನಾಂಕ: 22-4-83.

- - - -

ಮೇಲ್ಕಂಡ ಇನಾಂ ರದ್ದಿಯಾತಿ ಕಾನೂನು ಮೇರೆ ಸರ್ಕಾರವು ಆಗಿಂದಾಗ್ಗೆ ಇನಾಂ ಜಮೀನುಗಳ ಅಧಿಭೋಗದಾರಿಕೆಯ ಹಕ್ಕನ್ನು ಕೋರಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸುತ್ತಿದ್ದು ಉಲ್ಲೇಖದಲ್ಲಿನ ಸರ್ಕಾರದ ಸುತ್ತೋಲೆ ಮೇರೆ ಆ ಅವಕಾಶವು ದಿನಾಂಕ: 31-12-83ಕ್ಕೆ ಅಂತ್ಯಗೊಳ್ಳಲಿರುತ್ತೆ. ಇಷ್ಟೆಲ್ಲಾ ಅವಕಾಶ ಕೊಡುತ್ತಾ ಬಂದಿದ್ದರೂ ಸಹಾ ಅಂತಹ ಇನಾಂ ಜಮೀನುಗಳ ಸ್ವಾಧೀನಾನುಭವದಲ್ಲಿರುವವರುಗಳು ಬಹಳಷ್ಟು ಮಟ್ಟಿಗೆ ಆ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳದಿರುವುದು ಕಂಡುಬಂದಿರುತ್ತೆಯಾಗಿ ಈ ವಿಚಾರದಲ್ಲಿ ವಿಶೇಷ ಕಾರ್ಯಕ್ರಮದ ಅವಶ್ಯಕತೆ ಇರುತ್ತೆಯಾಗಿ ಈ ಜಿಲ್ಲೆಯ ತಹಸಿಲ್ದಾರರು:ವಿಶೇಷ ತಹಸಿಲ್ದಾರರು ರವರುಗಳು ಈ ಬಗ್ಗೆ ಜರೂರು ವಿಶೇಷ ಕಾರ್ಯಕ್ರಮ ಕೈಗೊಳ್ಳಲು ಆದೇಶಿಸಿದ್ದು ಈ ಕಾರ್ಯಕ್ರಮ ನಿರ್ವಹಿಸಲು ಹೋಬಳಿ ರಾಜಸ್ವ ನಿರೀಕ್ಷಕರುಗಳು ಮತ್ತು ಗ್ರಾಮ ಲೆಕ್ಕಿಗರುಗಳು ಪೂರ್ಣ ಜವಾಬ್ದಾರರುಗಳಾಗಿರುತ್ತಾರೆ.

ಮೊದಲನೆಯದಾಗಿ ಆಯಾಯ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮಲೆಕ್ಕಿಗರುಗಳು ಈ ಕೂಡಾ ನಿಗಧಿಪಡಿಸಿರುವ ನಮೂನೆಯಲ್ಲಿ ಮೇಲ್ಕಂಡ ಕಾಯಿದೆಗಳಿಗೊಳಪಟ್ಟಂತೆ ಇನಾಂ ಜಮೀನುಗಳ ಅಧಿಭೋಗದಾರಿಕೆಯ ಹಕ್ಕನ್ನು ತೀರ್ಮಾನವಾಗದಂತವುಗಳ ವಿವರವನ್ನು ತಯಾರಿಸಿಕೊಳ್ಳುವುದಿರುತ್ತೆ. ಆರ್.ಆರ್. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಮೂನೆಯ ಕಲಂ 2 ರಿಂದ 6ರಲ್ಲಿನ ವಿವರಗಳನ್ನು ತಯಾರಿಸಿಕೊಂಡು ಕಲಂ 7ರಲ್ಲಿನ ವಿವರವನ್ನು ತಹಲ್ ವರೆವಿಗೆ ಇನಾಂ ಜಮೀನುಗಳ ಅಧಿಭೋಗದ ಹಕ್ಕನ್ನು ಕೋರಿ ಬಂದಿರುವ ಅರ್ಜಿಗಳ ವಿವರವನ್ನು ತಾಲ್ಲೂಕು ಕಛೇರಿಯ ಭೂ ಸುಧಾರಣ ಶಾಖೆಯಿಂದ ಪಡೆಯಲು ತಿಳಿಯಿಸಿದ್ದು ಈ ಕಾರ್ಯವನ್ನು ದಿನಾಂಕ: 30-11-83ರೊಳಗೆ ಪೂರ್ಣಗೊಳಿಸುವುದಿದ್ದು ಈ ಬಗ್ಗೆ ಸಾಧಿಸಿರುವ ಪ್ರಗತಿಯನ್ನು ತಹಸಿಲ್ದಾರ್:ವಿಶೇಷ ತಹಸಿಲ್ದಾರರವರು ಪರಿಶೀಲಿಸಿದ ನಂತರ ರಾಜಸ್ವ ನಿರೀಕ್ಷಕರ 1983ನೇ ನವೆಂಬರ್ ಮಾಹೆಯ ತಲಬನ್ನು ಪಾವತಿ ಮಾಡಲು ಆದೇಶಿಸಿದೆ.

ಎರಡನೆಯದಾಗಿ ನಮೂನೆಯ ಕಲಂ 7ರವರೆವಿಗಿನ ವಿವರಗಳ ಆಧಾರದ ಮೇಲೆ ದಿನಾಂಕ 1-12-83 ರಿಂದ ದಿನಾಂಕ: 31-12-83ರೊಳಗೆ ಸಂಬಂಧಪಟ್ಟ ಗ್ರಾಮಗಳಿಗೆ ಭೇಟಿ ಕೊಟ್ಟು ಸಂಬಂಧಪಟ್ಟವರಿಂದ ಭೂ ನ್ಯಾಯ ಮಂಡಳಿಯ ಕಾರ್ಯದರ್ಶಿಯವರ ವಿಳಾಸಕ್ಕೆ ಅರ್ಜಿ ಪಡೆದು ಅರ್ಜಿ ಪಡೆದುದಕ್ಕೆ ಅರ್ಜಿದಾರರಿಗೆ ಸ್ಥಳದಲ್ಲೇ ಸ್ವೀಕೃತಿ ಪತ್ರ ಕೊಡಲು ರಾಜಸ್ವ ನಿರೀಕ್ಷಕರಿಗೇ ಗ್ರಾಮಲೆಕ್ಕಿಗರುಗಳಿಗೆ ತಿಳಿಯಿಸಿದ್ದು ಸದರಿ ನಮೂನೆಯಲ್ಲಿನ ವಿವರಗಳೊಂದಿಗೆ ಪಡೆದ ಅರ್ಜಿಗಳನ್ನು ದಿನಾಂಕ: 31-12-83ರಂದು ಭೂ ಸುಧಾರಣೆಯ ಕಾರ್ಯದರ್ಶಿ (ತಹಸಿಲ್ದಾರ್:ವಿಶೇಷತಹಸಿಲ್ದಾರ್) ಯವರಿಗೆ ತಲುಪಿಸುವುದು.

ಈ ವಿಶೇಷ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ತಹಸಿಲ್ದಾರ್:ವಿಶೇಷ ತಹಸಿಲ್ದಾರ್ ಹಾಗೂ ಕಾರ್ಯಪಾಲಕ ಶಿರಸ್ತೇದಾರರುಗಳಿಗೆ ವಹಿಸಿದ್ದು ಸಕಾಲದಲ್ಲಿ ಅರ್ಜಿಗಳನ್ನು ಪಡೆಯಲು ತಿಳಿಯಿಸಿರುತ್ತೆ. ಈ ಕಾರ್ಯದಲ್ಲಿ ಸಾಧಿಸಿದ ಪ್ರಗತಿ ಬಗ್ಗೆ ಕೂಲಂಕುಷ ವರದಿಯನ್ನು ದಿನಾಂಕ: 5-1-84ರೊಳಗೆ ಕಳುಹಿಸಲು ತಿಳಿಯಿಸಿದೆ.

ಈ ವಿಶೇಷ ಕಾರ್ಯದಲ್ಲಿ ನಿರ್ಲಕ್ಷತೆ ತೋರಿಸಿದ ನೌಕರರ ಮತ್ತು ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತೆಂದು ಸಹ ಎಚ್ಚರಿಸಿದೆ.

ಸಹಿ-
ವಿಶೇಷ ಜಿಲ್ಲಾಧಿಕಾರಿ,
ಹಾಸನ.

ನಕಲನ್ನು ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು:ತಹಸಿಲ್ದಾರರು:ವಿಶೇಷ ತಹಸಿಲ್ದಾರರು: ಕಾರ್ಯಪಾಲಕ ಶಿರಸ್ತೇದಾರರು ಮತ್ತು ರಾಜಸ್ವ ನಿರೀಕ್ಷಕರುಗಳಿಗೆ ಜರೂರು ಕ್ರಮಕ್ಕೆ ರವಾನಿಸಿದೆ.

ವಿಶೇಷ ಜಿಲ್ಲಾಧಿಕಾರಿಗಳ [illegible]